**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,**
**ನ.ರಾ.ಪುರ.**
**ಸಿ.ಸಿ. ನಂ ಃ164/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಆಶಾ | ಸಿ.ಡಬ್ಲ್ಯೂ - 01 |
| ಗಂಡನ ಹೆಸರು | ಃ ಜಾರ್ಜ್ ಎಂ ಎ | ಪಿ.ಡಬ್ಲ್ಯೂ - 01 |
| ವಯಸ್ಸು | ಃ 44 ವರ್ಷ | |
| ಉದ್ಯೋಗ | ಃ ಸ್ಟಾಫ್ ನರ್ಸ್ | |
| ವಾಸಸ್ಥಳ | ಃ ಎನ್ ಆರ್ ಪುರ. | |

ದಿನಾಂಕಃ **09/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ:

ಚಾಸಾ 2 ಮತ್ತು 3 ರವರು ನನ್ನ ಮಕ್ಕಳು. ಚಾಸಾ 4 ರವರು ಹೋಟೆಲ್ ಇಟ್ಟುಕೊಂಡಿದ್ದು, ಅವರ ಪರಿಚಯ ಇರುತ್ತದೆ. ಚಾಸಾ 5 ಮತ್ತು 6 ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಗಂಡನಾಗಿರುತ್ತಾರೆ.

2. ದಿಃ 17/07/2025 ರಂದು ಸಂಜೆ 7.00 ಗಂಟೆಗೆ ನಾನು ಕರ್ತವ್ಯ ಮುಗಿಸಿ ಮನೆಗೆ ಬಂದು ಟೀ ಕುಡಿದು ಬೈಕನ್ನು ಸರ್ವಿಸ್ ಗೆ ಕೊಟ್ಟಿದ್ದು ಅದನ್ನು ತಂದು ಮನೆಯಲ್ಲಿ ನಿಲ್ಲಿಸಿದೆನು. ಆವಾಗ ನನ್ನ ಗಂಡ ಬಂದು ನನ್ನ ಮಗಳು ಫೀ ಕೇಳಿದ್ದಕ್ಕೆ ಕೆಟ್ಟ ಪದಗಳಿಂದ ಬೈದು, ಅವಳ ಕೆನ್ನೆಗೆ ಹೊಡೆದಿರುತ್ತಾರೆ. ನಾನು ಆಗ ಯಾಕೆ ಮಗಳನ್ನು ಹೊಡೆಯುತ್ತೀರಿ ಎಂದು ಕೇಳಿದ್ದಕ್ಕೆ ಅವರು ನನಗೆ ಮಲಯಾಳಂ ನಲ್ಲಿ ಕೆಟ್ಟ ಪದಗಳಿಂದ ಬೈದಿರುತ್ತಾರೆ ಹಾಗೂ ಅಲ್ಲೇ ಇದ್ದ ಒಲೆ ಊದುವ ಕಾಪರ್ ಪೈಪ್ ನಿಂದ ನನ್ನ ಮುಖಕ್ಕೆ, ಕೆನ್ನೆಗೆ ಹೊಡೆದಿದ್ದಲ್ಲದೇ ನನ್ನ ಬಲಗೈಗೆ ಹೊಡೆದು ಗಾಯವನ್ನುಂಟು ಮಾಡಿರುತ್ತಾರೆ. ಆಗ ಅವರು ನನ್ನನ್ನು ಸಾಯಿಸುತ್ತೇನೆಂದು ಕತ್ತಿಯನ್ನು ಹಿಡಿದುಕೊಂಡು ಬಂದಿದ್ದರು. ಆಗ ಅಕ್ಕಪಕ್ಕದವರು ಅಂದರೆ ಮಂಜುನಾಥ, ಜಾರ್ಜ್ ಮತ್ತು ಹೊಟೇಲ್ ನಲ್ಲಿದ್ದ ವ್ಯಕ್ತಿಗಳು ಬಂದು ಜಗಳವನ್ನು ಬಿಡಿಸಿದರು. ನನ್ನ ಗಂಡ ಕತ್ತಿಯನ್ನು ಹಿಡಿದುಕೊಂಡು ಬರುವಾಗ ಅವರು ಮನೆ ಒಳಗೆ ಇದ್ದ ಗ್ಯಾಸ್ ಸಿಲಿಂಡರ್ ಆನ್ ಮಾಡಿ ಇನ್ನೊಂದು ಸಿಲಿಂಡರ್ ಗೆ ಮೊಳೆಯನ್ನು ಹೊಡೆದು ಬೆಂಕಿ ಹಚ್ಚಲು ಪ್ರಯತ್ನ ಮಾಡಿರುತ್ತಾರೆ. ವಿಜು ಮತ್ತು ಅನಿಲ್ ರವರು ನನ್ನನ್ನು ಆಟೋದಲ್ಲಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದು ನಾನು ಎನ್ ಆರ್ ಪುರ ಪೊಲೀಸ್ ಠಾಣೆಗೆ ಹೋಗಿದ್ದು, ಆಗ ಅವರು ನನಗೆ ಆಸ್ಪತ್ರೆಗೆ ಹೋಗುವಂತೆ ಹೇಳಿ ತಾವು ಅಲ್ಲೇ ಬಂದು ಹೇಳಿಕೆ ಪಡೆಯುವುದಾಗಿ ಹೇಳಿದರು.

3. ರಾತ್ರಿ 1.00 ಗಂಟೆ ಸುಮಾರಿಗೆ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ದಿ: 24/07/2025 ರಂದು ಪೊಲೀಸರು ನಮ್ಮ ಮನೆಗೆ ಬಂದಿದ್ದು, ನನ್ನ ಮಗಳು ತೋರಿಸಿದ ಜಾಗದಲ್ಲಿ ಸ್ಥಳವನ್ನು ಪರಿಶೀಲನೆ ಮಾಡಿ ಮಹಜರು ಮಾಡಿರುತ್ತಾರೆ. ನಂತರ ನಾನು ಕೊಪ್ಪ ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

4. ಸಾಕ್ಷಿ ತಾ ಪೊಲೀಸರಿಗೆ ನೀಡಿದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯ್ತು. ನನ್ನ ಬಲಗೈ ಗೆ ಪೆಟ್ಟು ಬಿದ್ದ ಕಾರಣ ನಾನು ಹೆಬ್ಬೆಟ್ಟನ್ನು ಹಾಕಿರುತ್ತೇನೆ. ಸಾಕ್ಷಿಯು ತಾವು ಕಲಂ 183(6) ಬಿ ಎನ್ ಎಸ್ ಎಸ್ ರಡಿಯಲ್ಲಿ ನ್ಯಾಯಾಧೀಶ ಮುಂದೆ ನೀಡಿದ ಹೇಳಿಕೆಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯ್ತು. ನನ್ನ ಬಲಗೈ ಗೆ ಪೆಟ್ಟು ಬಿದ್ದ ಕಾರಣ ನಾನು ಹೆಬ್ಬೆಟ್ಟನ್ನು ಹಾಕಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದೂವರೆ ಅಡಿ ಉದ್ದದ ಕಾಪರ್ ಪೈಪನ್ನು ನೋಡಿ ಗುರುತಿಸಿದ್ದು ಅದನ್ನು ಎಂ ಒ 1 ಎಂದು ಗುರುತಿಸಲಾಯ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು: ಮಾನ್ಯ ಎ ಪಿ ಪಿ ಯವರಿಂದ:</u>

ನಾನು ಹೇಳಿಕೆ ಕೊಡುವ ಕಾಲಕ್ಕೆ ನನ್ನ ಮತ್ತು ಆರೋಪಿಯ ನಡುವೆ 16 ವರ್ಷಗಳ ಹಿಂದೆ ಮದುವೆಯಾಗಿತ್ತು ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಸುಮಾರು 11 ವರ್ಷಗಳಿಂದ ಸುಬ್ಬಯ್ಯ ಮೆಡಿಕಲ್ ಕಾಲೇಜ್ ನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ಹೇಳಿದೆ ಎಂದರೆ ಸರಿ. ಮದುವೆಯಾದ ಹೊಸದರಲ್ಲಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು ಆಮೇಲೆ ನನ್ನ ಗಂಡ ನನಗೆ ಹೊಡೆಯುತ್ತಿದ್ದ ಎಂದು ಹೇಳಿದ್ದೆ ಎಂದರೆ ಸರಿ. ನಾನು ನನ್ನ ಗಂಡನ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದು ಅದನ್ನು ರಾಜಿ ಮೂಲಕ ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿ.

2. ಆ ದಿನ ನನ್ನ ಗಂಡ ನನಗೆ ಹೊಡೆಯುವ ಕಾಲಕ್ಕೆ ಶಿವಕುಮಾರ್ ಮತ್ತು ಸೆಬಾಸ್ಟಿನ್ ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಪೊಲೀಸರು ಮಹಜರು ಮಾಡುವ ಕಾಲಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿ. ನಾನು ಹೇಳಿಕೆ ನೀಡುವ ಕಾಲಕ್ಕೆ ನಮ್ಮ ಪಕ್ಕದ ಮನೆಯ ವಿಜು ಮತ್ತು

ಅನಿಲ್ ರವರು ನನ್ನನ್ನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ಹೇಳಿಕೆ ನೀಡಿದ್ದು ಆದರೆ ಗಲಾಟೆಯಾದಾಗ ಅಲ್ಲೇ ಪಕ್ಕದ ಹೋಟೆಲ್ ನಿಂದ ಬಂದ ಮಂಜುನಾಥ ಅಲಿಯಾಸ್ ಅಂಜನ್ ಎನ್ನುವವರು ಜಗಳ ಬಿಡಿಸಿ ನಂತರ ನಾನು, ನನ್ನ ಮಕ್ಕಳ ಜೊತೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುತ್ತೇನೆ ಎಂದು ಮುಂದುವರಿದ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದ:

(ಆರೋಪಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯ್ತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ: